☎: 080 - 22870060
🖷: 080-22875798
email:dmekarnataka@yahoo.com

# ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
# DIRECTORATE OF MEDICAL EDUCATION

ಆನಂದರಾವ್‌ವೃತ್ತ, ಬೆಂಗಳೂರು-560 009.
Ananda Rao Circle, BANGALORE-560 009.

ಸಂಖ್ಯೆ: ನಿವೈಶಿ/ಎಸಆರ್‌ಓ(1)/123/2017-18 ದಿನಾಂಕ: 31.01.2018

## <u>ಪ್ರಕಟಣೆ</u>

ವಿಷಯ: ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಖಾಲಿಯಿದ್ದ ಡೀನ್ ಕಂ ನಿರ್ದೇಶಕರ ಹುದ್ದೆಯ ನೇಮಕಾತಿಯ ಬಗ್ಗೆ

ಉಲ್ಲೇಖ: ಸಂಖ್ಯೆ:ನಿವೈಶಿ/ಎಸಆರ್‌ಓ(1)/123/2017-18 ದಿನಾಂಕ. 17.01.18 ಮತ್ತು 19.01.2018

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವೈದ್ಯಕೀಯ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಖಾಲಿಯಿದ್ದ ಡೀನ್ ಕಂ ನಿರ್ದೇಶಕರ ಹುದ್ದೆಯ ನೇಮಕಾತಿಗಾಗಿ ದಿನಾಂಕ 17.01.2018ರಂದು www.karnataka.gov.in/ dmekarnataka ವೆಬ್ ಸೈಟಿನಲ್ಲಿ ಮತ್ತು ದಿನಾಂಕ 19.01.2018ರಂದು ಕನ್ನಡ ಮತ್ತು ಆಂಗ್ಲ ದಿನ ಪತ್ರಿಕೆಗಳಲ್ಲಿ ಅರ್ಹ ಅಭ್ಯರ್ಥಿಗಳನ್ನು ಅಹ್ವಾನಿಸಿ ಪ್ರಕಟಿಸಲಾಗಿತ್ತು.

ಈ ಸಂಬಂಧ ದಿನಾಂಕ 01.02.2018ರಂದು ಮಧ್ಯಾಹ್ನ 3.00 ಗಂಟೆಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಸಂಧರ್ಶನ ದಿನವನ್ನು ನಿಗಧಿಪಡಿಸಲಾಗಿತ್ತು.

ಮುಂದುವರೆದು, ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ. 3791/2017 (S-RES) ದಾಖಲಾಗಿರುತ್ತದೆ. ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯವು ಸದರಿ ನೇಮಕಾತಿ ಕುರಿತು ಮಧ್ಯಂತರ ಆದೇಶವನ್ನು ಹೊರಡಿಸಿದ್ದು, ಈ ನೇಮಕಾತಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ದಿನಾಂಕ 20.02.2018ರವರೆಗೆ ತಡೆಹಿಡಿಯುವಂತೆ ಆದೇಶಿಸಿರುತ್ತದೆ. ಈ ಕಡತದೊಂದಿಗೆ ರಿಟ್ ಅರ್ಜಿ ಸಂಖ್ಯೆ 4448/2018ರ ಈ ಕಡತಕ್ಕೆ ಸಹ ಸೇರಿಸುವಂತೆ ನಿರ್ದೇಶಿಸಿರುತ್ತದೆ.

<u>ಆದಕಾರಣ ದಿನಾಂಕ 01.02.2018ರಂದು ನಡೆಸಬೇಕಾಗಿದ್ದ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಕಂ ನಿರ್ದೇಶಕರ ಹುದ್ದೆಯ ಸಂದರ್ಶನವನ್ನು ಮುಂದೂಡಲಾಗಿದೆ ಮತ್ತು ಮುಂದಿನ ಸಂದರ್ಶನ ದಿನಾಂಕವನ್ನು ತಿಳಿಸಲಾಗುವುದು.</u>

**ವೈದ್ಯಕೀಯ ಶಿಕ್ಷಣ ನಿರ್ದೇಶಕರು.**

ಪ್ರತಿಯನ್ನು :

1. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ಈ ವಿಷಯವನ್ನು ಮಾನ್ಯ ಸಚಿವರ ಅವಗಾಹನೆಗೆ ತರುವಂತೆ ಕೋರಲಾಗಿದೆ.
2. ಅಪರ ಮುಖ್ಯ ಕಾರ್ಯದರ್ಶಿಗಳು, ವೈದ್ಯಕಿಯ ಶಿಕ್ಷಣ ಇಲಾಖೆ, ಎಂಎಸ್ ಬಿಲ್ಡಿಂಗ್, ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಲಾಗಿದೆ.